ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.627/2023**

**CW-7 / PW-5**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸಿದ್ದಪ್ಪ |
| ತಂದೆ | ಃ | ಕತಾಲಪ್ಪ |
| ವಯಸ್ಸು | ಃ | 45 |
| ಉದ್ಯೋಗ | ಃ | ಮುಖ್ಯ ಪೇದೆ |
| ವಾಸಸ್ಥಳ | ಃ | ಯಾದಗಿರಿ |
| ಪ್ರಮಾಣಿಕರಿಸಿದ ದಿನಾಂಕ | ಃ | **29-08-2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ನಾನು 2012 ರಿಂದ 2018 ವರೆಗೆ ವಡಗೇರಾ ಠಾಣೆಯಲ್ಲಿ ಪಿ.ಸಿ ಎಂದು ಕೆಲಸ ಮಾಡಿರುತ್ತೇನೆ.

ದಿನಾಂಕ **16-09-2016** ರಂದು ನಾನು ಚಾಸಾ**-6** ಮತ್ತು **8** ರವರನ್ನು ಚಾಸಾ**-10** ರವರು ಕರೆದು ಯಾರೋ ಅಬಪರಿಚಿತ ವ್ಯಕ್ತಿಗಳು ಟಾಟಾ ಸುಮೋದಲ್ಲಿ ಕುರಿಗಳನ್ನು ಹಾಕಿಕೊಂಡು ಹತ್ತಿಗೂಡೂರು ಕಡೆಯಿಂದ ಬರುತ್ತಿದ್ದಾಗ ಬಾತ್ಮಿ ಬಂದಿದ್ದು ತಕ್ಷಣ ಚಾಸಾ**-4** ಮತ್ತು **5** ಪಂಚರನ್ನು ಕರೆದುಕೊಂಡು ನಾವೆಲ್ಲರ ಖಾನಪೂರು ಕ್ರಾಸ ಹತ್ತಿರ ರಸ್ತೆಯ ಮೇಲೆ ಪರಿಶೀಲನೆ ಮಾಡುತ್ತಿದ್ದಾಗ ಬೆಳಿಗ್ಗೆ **11** ಗಂಟೆಗೆ ಹತ್ತಿಗೂಡೂರು ಕಡೆಯಿಂದ ಟಾಟಾ ಸುಮೋ ವಾಹನ ಬಂದಿದ್ದು ಸದರಿ ವಾಹನವನ್ನು ತಡೆದು ನಿಲ್ಲಿಸಲಾಗಿ ವಾಹನದ ದಾಖಲಾತಿಗಳನ್ನು ನೀಡುವಂತೆ ಚಾಸಾ**-10** ರವರು ಸದರಿ ವಾಹನದ ಚಾಲಕನನ್ನು ಕೇಳಿದಾಗ ಸದರಿ ವಾಹನದ ಚಾಲಕ ದಾಖಲಾತಿಗಳನ್ನು ತರಲು ವಾಹನದ ಕಡೆಗೆ ಹೋದಂತೆ ಮಾಡಿ ಅಲ್ಲಿಂದ ಓಡಿ ಹೋಗಿರುತ್ತಾನೆ. ತಕ್ಷಣ ನಾವು ಪಂಚರ ಸಮಕ್ಷಮ ಸದರಿ ಟಾಟಾ ಸುಮೋ ವಾಹನವನ್ನು ಪರಿಶೀಲನೆ ಮಾಡಲಾಗಿ ಸದರಿ ವಾಹನದಲ್ಲಿ **14** ಕುರಿಗಳು ಮತ್ತು **4** ಠಗರುಗಳು ಇರುವುದು ಕಂಡು ಬಂದಿರುತ್ತದೆ. ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಸದರಿ ಕುರಿ ಮತ್ತು ಠಗರುಗಳನ್ನು ಜಪ್ತಿ ಮಾಡಿಕೊಳ್ಳಲಾಗಿರುತ್ತದೆ. ಸದರಿ ಪಂಚನಾಮೆ ಆಧಾರದ ಮೇಲೆ ವಡಗೇರಾ ಠಾಣ ಗುನ್ನೆ ನಂ.**99/2016** ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಂಡಿರುತ್ತಾರೆ. ದಿನಾಂಕ **29.10.2016** ರಂದು ಸಿಪಿಐ ದೇವದುರ್ಗ ಇವರ ಕಛೇರಿಗೆ ಬಂದಿದ್ದು ಆಗ ಕಛೇರಿಯಲ್ಲಿ ಇದ್ದ ವ್ಯಕ್ತಿಯನ್ನು ನಾನು ನೋಡಿ ಗುರುತಿಸಿದ್ದು ಸದರಿ ವ್ಯಕ್ತಿ ಟಾಟಾ ಸುಮೋದಲ್ಲಿ ಕುರಿ ಮತ್ತು ಠಗರುಗಳನ್ನು ಹಾಕಿಕೊಂಡು ಬಂದಿದ್ದು ಸದರಿ ದಿನ ಓಡಿ ಹೋದ ವ್ಯಕ್ತಿ ಈತನೇ ಆಗಿರುತ್ತಾನೆ ಎಂದು ಗುರುತಿಸಿರುತ್ತೇನೆ. ನಂತರ **3** ಜನ ಆರೋಪಿತರು ಗಬ್ಬೂರು ಪೊ.ಠಾ ವ್ಯಾಪ್ತಿಯ ಮುಷ್ಠೂರು ಕ್ರಾಸ ಹತ್ತಿರ ಹಾಕಿದ್ದ ಕುರಿ ಶೆಡ್ಡಗಳಿಂದ ಕುರಿಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ತಿಳಿದು ಬಂದಿರುತ್ತದೆ. ಆ ಕುರಿತು ನಾನು ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಹೆಸರು ರಮೇಶ ಇರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **VDC** ವಕೀಲರಿಂದ.

ಖಾನಪೂರು ಕ್ರಾಸ ಹತ್ತಿರ ಹೋದಾಗ ಬೆಳಿಗ್ಗೆ 10.45 ಗಂಟೆ ಆಗಿತ್ತು. ಕ್ರಾಸನಿಂದ ಅಂದಾಜು 15 ಅಡಿ ಅಂತರದಲ್ಲಿ ನಮ್ಮ ವಾಹನ ನಿಲ್ಲಿಸಿರುತ್ತೇವೆ. ಸದರಿ ಕ್ರಾಸನಲ್ಲಿ ಶಹಪೂರುನಿಂದ ಯಾದಗಿರಿ ಮತ್ತು ಹತ್ತಿಗುಡೂರಿನಿಂದ ಯಾದಗಿರಿಗೆ ಹೋಗುವ ರಸ್ತೆ ಇವೆ ಎಂದರೆ ಸರಿ. ಸದರಿ ರಸ್ತೆಗಳಲ್ಲಿ ಸಾಕಷ್ಟು ವಾಹನಗಳ ಸಂಚಾರ ಇರುತ್ತದೆ ಎಂದರೆ ಸರಿ. ಕ್ರಾಸ ಹತ್ತಿರ ಪಂಚರ ಅಂಗಡಿ ಮತ್ತು ಬಸ್ ನಿಲ್ದಾಣ ಮಾತ್ರ ಇರುತ್ತದೆ. ಸದರಿ ನಮ್ಮ ವಾಹನವನ್ನು ಸುರಪೂರು ಕಡೆ ಮುಖ ಮಾಡಿ ನಿಲ್ಲಿಸಿರುತ್ತೇವೆ. ಘಟನ ಸ್ಥಳದಿಂದ ವಡಗೇರಾ ಠಾಣೆ ಪಶ್ಚಿಮಕ್ಕೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಪೂರ್ವಕ್ಕೆ ಇದೆ ಎಂದು ನುಡಿಯುತ್ತಾರೆ. ಚಾಸಾ-6 ರವರು ಪಂಚರನ್ನು ಕರೆದುಕೊಂಡು ಬಂದಿರುತ್ತಾರೆ. ನಮ್ಮ ವಾಹನ ನಿಲ್ಲಿಸಿದ 5 ಅಡಿ ಅಂತರದಲ್ಲಿ ಆರೋಪಿ ತನ್ನ ವಾಹನವನ್ನು ನಿಲ್ಲಿಸಿರುತ್ತಾನೆ. ಆರೋಪಿ ಉತ್ತರ ದಿಕ್ಕಿಗೆ ಓಡಿ ಹೋಗಿರುತ್ತಾನೆ ಹಿಡಿಯಲು ಪ್ರತಯತ್ನಿಸಿರುತ್ತೇವೆ ಸಿಕ್ಕಿರಲಿಲ್ಲ.

ಟಾಟಾ ಸುಮೋ ವಾಹನ ಜನರು ಪ್ರಯಾಣಿಸುವ ವಾಹನ ಆಗಿತ್ತು ಎಂದರೆ ಸರಿ. ಸದರಿ ವಾಹನದಲ್ಲಿ 7 ಜನರು ಕುಳಿತುಕೊಳ್ಳುವ ಆಸನ ಮಾಡಿದ ವಾಹನ ಇತ್ತು ಎಂದರೆ ಸಾಕ್ಷಿ ಹಿಂಬದಿಯ ಆಸನಗಳು ಇರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಟಾಟಾ ಸುಮೋದ ಮಧ್ಯದಲ್ಲಿ 4 ಮತ್ತು ಹಿಂಬದಿಯಲ್ಲಿ 14 ಕುರಿ ಮತ್ತು ಠಗರುಗಳನ್ನು ಹಾಕಿದ್ದರು. ಟಾಟಾ ಸುಮೋದ ಹಿಂಬದಿಯಲ್ಲಿ 14 ಕುರಿಗಳನ್ನು ಹಾಕಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣ ಕುರಿತು ನಾನು 2 ಹೇಳಿಕೆಗಳನ್ನು ನೀಡಿರುತ್ತೇನೆ. ವಡಗೇರಾ ಠಾಣೆಯಲ್ಲಿ ದಿನಾಂಕ 16.09.2016 ರಂದು ಮತ್ತು ದಿನಾಂಕ 29.10.2016 ರಂದು ದೇವದುರ್ಗ ಸಿಪಿಐ ಕಛೇರಿಯಲ್ಲಿ ಹೇಳಿಕೆ ನೀಡಿರುತ್ತೇನೆ. ಜಪ್ತಿ ಮಾಡಿಕೊಂಡ ಕುರಿ ಮತ್ತು ಠಗರುಗಳು ಸಾಮಾನ್ಯವಾಗಿ ಕುರಿ ಸಾಕುವವರ ಬಳಿ ದೊರೆಯುತ್ತವೆ ಎಂದರೆ ಸರಿ. ನಾವು ಜಪ್ತಿ ಮಾಡಿಕೊಂಡ ಕುರಿಗಳನ್ನು ಕೇಳಿಕೊಂಡು ಜನರು ಯಾರು ವಡಗೇರಾ ಠಾಣೆಗೆ ದಿನಾಂಕ 29.10.2016 ಒಳಗೆ ಯಾರು ಬಂದಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ಚಾಸಾ-**10** ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.319/2023**

**PW-2 CW-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಬೂದೆಪ್ಪ |
| ತಂದೆ | ಃ | ಮರೆಪ್ಪ |
| ವಯಸ್ಸು | ಃ | 32 |
| ಉದ್ಯೋಗ | ಃ | ಚಾಲಕ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **07.08.2025** |

---

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ಮುಮಾಗಳನ್ನು ಜಪ್ತಿ ಮಾಡಿಕೊಂಡಿಲ್ಲ. ಪಂಚನಾಮೆಯ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.

ದಿನಾಂಕ 01-06-2022 ರಂದು ಸಂಜೆ 04.30 ರಿಂದ 05.30 ಗಂಟೆ ವರೆಗೆ ಘಟನ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಮಟಕಾ ಚೀಟಿ, ಬಾಲಪೆನ್ನು ಮತ್ತು ಹಣವನ್ನು ಜಪ್ತಿ ಮಾಡಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ್ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.319/2023**

**PW-3 CW-3**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರವಿ ಉರ್ಫ ರವೀಂದ್ರ |
| ತಂದೆ | ಃ | ಬಸ್ಸಪ್ಪ |
| ವಯಸ್ಸು | ಃ | 45 |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಗಬ್ಬೂರು |
| ಪ್ರಮಾಣಿಕರಿಸಿದ ದಿನಾಂಕ | ಃ | **07.08.2025** |

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.

ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಮುಮಾಗಳನ್ನು ಜಪ್ತಿ ಮಾಡಿಕೊಂಡಿಲ್ಲ. ಪಂಚನಾಮೆಯ ಮೇಲಿನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು. ಪಂಚನಾೆಮಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದ.

ದಿನಾಂಕ 01-06-2022 ರಂದು ಸಂಜೆ 04.30 ರಿಂದ 05.30 ಗಂಟೆ ವರೆಗೆ ಘಟನ ಸ್ಥಳದಲ್ಲಿ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪೋಲಿಸರು ಪಂಚನಾಮೆ ಮಾಡಿ ಮಟಕಾ ಚೀಟಿ, ಬಾಲಪೆನ್ನು ಮತ್ತು ಹಣವನ್ನು ಜಪ್ತಿ ಮಾಡಿಕೊಂಡು ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.